ನಡೆದಳು. ಆಕೆಗೆ ಉಭಯ ಸಂಕಟವಾಗಿತ್ತು. ಪ್ರದೀಪ ಆಕೆಯ ಜೊತೆ ಇರಲು ತಿಳಿಸಿದರೆ ಆಕೆ ಹೊರಗಟ್ಟುತ್ತಿದ್ದಾಳೆ. ಇದನ್ನು ಹೋಗಿ ತಿಳಿಸಿದರೆ ಇಬ್ಬರ ನಡುವೆ ಮತ್ತೆ ಮನಸ್ತಾಪ ಆಗುತ್ತದೆ. ಇಲ್ಲಿ ಸಮಸ್ಯೆ ಏನೆಂದು ತನಗೆ ಅರ್ಥವಾಗುತ್ತಿಲ್ಲ ಎನಿಸಿತು. ಹೊರಗೆ ಕುಳಿತಿದ್ದ ಪ್ರದೀಪನಲ್ಲಿಗೆ ಬಂದು, 'ಮೇಡಮ್ ಕರೀತಿದ್ದಾರೆ' ಎಂದಷ್ಟೇ ನುಡಿದಳು. ಅವನು ಕೋಣೆಯೊಳಗೆ ಬರುತ್ತಲೂ,

'ಆಕೆ ನಾಳೆಯಿಂದ ಬೇಡ' ಎಂದು ಮತ್ತೆ ನುಡಿದಳು.

'ಬಡವಳು. ಆಕೆಗೆ ಯಾರೂ ದಿಕ್ಕಿಲ್ಲ. ಈ ಮನೆ ಆಶ್ರಯ ಬಯಸಿ ಬಂದಿದ್ದಾರೆ. ಸ್ವಲ್ಪ ದಿನ ಇರಲಿ ಎಂದುಕೊಂಡೆ. ಬೇಡ ಅಂದರೆ ಬೀದೀಲಿ ಬೀಳ್ತಾರೆ. ಒಂಟಿ ಹೆಂಗಸು. ಕಷ್ಟದಲ್ಲಿದ್ದವರಿಗೆ ಸಹಾಯ ಆಗಲಿ. ನಿನಗೂ ನಾನು ಇಡೀ ದಿನ ಹೊರಗೆ ಇದ್ದಾಗ ಬೋರ್ ಆಗುತ್ತೆ. ನಿಧಿನೂ ಬೆಳೀತಿದ್ದಾಳೆ. ಸಹಾಯಕ್ಕಿರಲಿ ಎಂದುಕೊಂಡೆ. ಬೇಡ ಎಂದರೆ ಕಳಿಸುವೆ. ನಾವೇನು ಮಾಡುವುದಕ್ಕಾಗುತ್ತೆ. ಅವರವರ ಕರ್ಮ' ಎಂದ.

ನಿವಿಗೆ ಅವನ ಮಾತು ರುಚಿಸಲಿಲ್ಲ. ಕೆಲವು ಕ್ಷಣಗಳ ಹಿಂದೆ ಕೈ ಮುಗಿದು ನಿಂತ ಪ್ರಭಾವತಿಯ ಅಸಹಾಯಕ ಚಿತ್ರ, ಅವನು ಈಗ ಹೇಳಿದ ಚಿತ್ರಣಕ್ಕೆ ಅವಳ ಮನಸ್ಸು ತಾಳೆ ಹಾಕಿ ಹೊಂದಿಸಿಕೊಂಡಿತು.

'ಹಾಗನ್ನಬೇಡಿ. ಇರಲಿ ಬಿಡಿ. ನಾವು ತಿನ್ನುವುದರಲ್ಲೇ ಒಂದು ತುತ್ತು ತಿನ್ನುವರು. ಪಾಪ' ಎಂದಳು. ಅವಳ ಸ್ವಭಾವ ಬಲ್ಲ ಪ್ರದೀಪ ತನ್ನ ಬಾಣ ಗುರಿ ಮುಟ್ಟಿದ್ದನ್ನು ಕಂಡು ಮನದಲ್ಲೇ ನಕ್ಕ. ರಾತ್ರಿ ಪ್ರಭಾವತಿ ಮುಂದೆ ನಿಂತು ಬಡಿಸಿದಾಗ ನಿವಿ ಅವರ ಬಳಿ ಸಮಾಧಾನದಿಂದಲೇ ಮಾತನಾಡಿಸಿದಳು. ವಾತಾವರಣ ಒಂದು ಹದಕ್ಕೆ ಬಂದಿತ್ತು.

ಅಧ್ಯಾಯ 5

ನಿವೇದಿತಾ ತನಗೊಬ್ಬಳು ಸಹಾಯಕಿಯನ್ನು ಪ್ರದೀಪ ನೇಮಿಸಿದ್ದಾನೆಂದು ತನ್ನ ಹೆತ್ತವರಿಗೆ ತಿಳಿಸಿದಾಗ ಅದು ಪ್ರದೀಪನ ಕಾಳಜಿಯಾಗಿರದೇ ಆತನ ಎಚ್ಚರಿಕೆಯ ನಡೆಯೆಂದು ಅವರಿಗೆ ಹೊಳೆದಿತ್ತಾದರೂ ಮಗಳೆದುರು ಅದನ್ನು ಹೊರಗೆಡವದಾದರು.

'ನಿನಗೆ ಅನುಕೂಲವಾಯಿತಲ್ಲ, ಇರಲಿ' ಎಂದು ಮಗಳ ಮನಸ್ಸನ್ನು ತಿಳಿಗೊಳಿಸಿದರು.

'ಆದರೂ ಏಕೋ ಪಪ್ಪ, ಇವರು ಮೊದಲಿನಂತಿಲ್ಲ. ನಿಮಗೆ ಕಾರಣ ಗೊತ್ತಿದೆ. ಆದರೆ ನೀವು ಹೇಳುತ್ತಿಲ್ಲ. ನನ್ನಿಂದ ಏನೋ ಮರೆ ಮಾಚುತ್ತಿದ್ದೀರಿ. ಇದ್ದಕ್ಕಿದ್ದ ಹಾಗೆ ಏನೋ ಬದಲಾವಣೆ ಆಗಿದೆ. ಈಗ ನೋಡಿದರೆ ಈ ಸಹಾಯಕಿ ಬಂದಿದ್ದಾರೆ. ನಾನು ಮಗುವನ್ನು ಸರಿಯಾಗಿ ನೋಡಿಕೊಳ್ತಿಲ್ವಾ?'

'ಇಲ್ಲಸಲ್ಲದ್ದು ಯೋಚಿಸಿ ತಲೆ ಹಾಳು ಮಾಡಿಕೊಳ್ಳಬೇಡ. ಅಂಥದ್ದೇನೂ ಇಲ್ಲ. ಪ್ರದೀಪ ದೂರದೂರಿಗೆ ಬಿಸಿನೆಸ್ ಅಂತ ಹೋಗುವಾಗ ನೀನು ಒಂಟಿ ಆಗ್ತೀಯ ಅನ್ನುವ ಚಿಂತೆ ಅವನದ್ದು. ಅನುಕೂಲ ಇದೆ. ಇಟ್ಟಿದ್ದಾನೆ ಬಿಡು. ಸುಖ ಪಡು ಅಷ್ಟೇ' ಎಂದರು. ನಿವಿಗೆ ಅಪ್ಪನ ಮಾತು ಅಂಥ ಸಮಾಧಾನವೇನೂ ನೀಡಲಿಲ್ಲ.

## ಕಳೆದ ಸಂಚಿಕೆಯಲ್ಲಿ



ನಿವೇದಿತಾಳ ಮಾನಸಿಕ ಸ್ಥಿತಿಯ ಬಗ್ಗೆ ಕೃತಿಕಾ ಸೂಕ್ಷ್ಮವಾಗಿ ಹೇಳಿದ್ದು ಪ್ರದೀಪನ ಮನಸಿನಲ್ಲಿ ಉಳಿಯಿತು. ಮಗುವನ್ನು ಉಸಿರುಗಟ್ಟಿಸಲು ನಿವೇದಿತಾ ಪ್ರಯತ್ನಿಸಿದ ಬಗ್ಗೆ ಎಷ್ಟು ಹೇಳಿದರೂ ಕೇಶವ–ವೀಣಾ ದಂಪತಿ ಒಪ್ಪಿಕೊಳ್ಳದೆ ಹೋದಾಗ, ಪ್ರದೀಪನಿಗೆ ಅಯೋಮಯವೆನ್ನಿಸಿತು. ನಿವೇದಿತಾ ಕೂಡ ಏನೂ ನಡೆದೇ ಇಲ್ಲ ಎನ್ನುವಂತೆ ವರ್ತಿಸತೊಡಗಿದಳು. ಗಂಡನೊಂದಿಗೆ ಪ್ರಣಯದ ಕ್ಷಣಗಳನ್ನು ಕಳೆದ ಸ್ವಲ್ಪ ಸಮಯದಲ್ಲೇ, ಕಚೇರಿಯ ಉದ್ಯೋಗಿಯೊಡನೆ ಪ್ರದೀಪನಿಗೆ ಸಂಬಂಧ ಕಲ್ಪಿಸಿ ಹಂಗಿಸತೊಡಗಿದಳು. ತನ್ನ ಬಗ್ಗೆ ಪ್ರದೀಪ ಆಸಕ್ತಿ ಕಳೆದುಕೊಂಡಿದ್ದಾನೆಂದು ಕಟುವಾಗಿ ಮಾತನಾಡಿದಳು. ಹೆಂಡತಿಯ ಯೋಚನಾಲಹರಿ ಪ್ರದೀಪನ ಕಂಗಾಲಾಗಿಸಿತು. ಅವಳು ಮನೆಗೆ ಬರುತ್ತೇನೆಂದು ಹಟ ಹಿಡಿದಾಗ ಅವನ ತಳಮಳ ಮತ್ತೂ ಹೆಚ್ಚಾಯಿತು. ಮಗುವನ್ನು ನೋಡಿಕೊಳ್ಳಲು ಸಹಾಯಕಿಯೊಬ್ಬಳನ್ನು ನೇಮಿಸಿಕೊಂಡ ನಂತರ ನಿವೇದಿತಾ–ನಿಧಿಯನ್ನು ಮನೆಗೆ ಕರೆತರಲು ಆವನು ಯೋಚಿಸಿದ. ಆದರೆ, ಸಹಾಯಕಿ ದೊರೆಯುವ ಮೊದಲೇ ನಿವೇದಿತಾ ಮಗುವಿನೊಂದಿಗೆ ಗಂಡನ ಮನೆಗೆ ತಾನೇ ಬಂದಳು. ಕೊನೆಮೊದಲಿಲ್ಲದ ಸಮಸ್ಯೆಯನ್ನು ಎದುರಿಸುವುದು ಹೇಗೆಂದು ತಿಳಿಯದೆ ಪ್ರದೀಪ ಆತಂಕಕ್ಕೊಳಗಾದ.

ಮಗುವಿನ ಬಟ್ಟೆ ಟೆರೇಸ್ ಮೇಲೆ ಒಣಗಲು ಹಾಕಿದ್ದನ್ನು ತರಲು ಹೋದಾಗ ಅಲ್ಲಿದ್ದ ಏಣಿ ಕಾಣಿಸಲಿಲ್ಲ. ಅವಳು ಕೆಳಗಿಳಿದು ಬಂದು ಮನೆಯ ಹಳೆಯ ಸಹಾಯಕಿಯನ್ನು ಕರೆದು ವಿಚಾರಿಸಿದಾಗ ಆಕೆ, 'ನೀವು ಅಮ್ಮನ ಮನೇಗೆ ಹೋದಾಗ ಸಿಸಿಟಿವಿಯವರು ಬಂದಿದ್ರಲ್ವಕ್ಕ. ಆಗ ಸರ್ ಕೆಳಗೆ ತರಿಸಿದ್ರು. ಮೇಲಿಡೋದು ಮರೆತು ಹೋದೆ. ಈಗಲೇ ಇಡ್ತೇನೆ' ಎಂದಳು.

ನಿವಿ ಹುಬ್ಬುಗೂಡಿಸಿ, 'ಸಿಸಿಟಿವಿಯವರಾ, ಒಳಗೆ ಬಂದಿದ್ರಾ? ಯಾಕೆ?'

'ಗೊತ್ತಿಲ್ಲಕ್ಕ. ಇಲ್ಲಿ, ಬೆಡ್ ರೂಮಿನಲ್ಲಿ ಎಲ್ಲಾ ಇಟ್ಟಿದ್ದಾರೆ. ನಾನು ಹೇಳಿದೆ ಅಂತ ಹೇಳ್ಬೇಡಿ. ನನಗೆ ಕೆಲಸದಿಂದ ಕಿತ್ತು ಹಾಕ್ತಾರೆ ಮತ್ತೆ' ಆಕೆ ನುಡಿದಾಗ ನಿವಿಗೆ ಆಘಾತವಾಗಿತ್ತು. ಅವಳು ಅಲ್ಲೇ ಕುರ್ಚಿಯಲ್ಲಿ ಕುಸಿದು ಕುಳಿತಳು. ಮನದಲ್ಲಿ ವಿಚಿತ್ರ ಕೋಲಾಹಲ. ಒಂದು ಕ್ಷಣ ಸ್ತಬ್ಧಳಾಗಿ ಕುಳಿತುಬಿಟ್ಟಳು. ಆಕೆ ಹೇಳಿದ್ದನ್ನು ಮೊದಲು ದೃಢೀಕರಿಸಿಕೊಳ್ಳದೇ ಮಾತನಾಡಬಾರದೆಂದು ಮೊದಲು ಸೂಕ್ಷ್ಮವಾಗಿ ಅದರ ಕೇಬಲ್ ಅನ್ನು ಹುಡುಕುತ್ತ ಹೋದವಳಿಗೆ ಮನೆಯ ಹಾಲ್ ಮತ್ತು ಬೆಡ್ ರೂಮ್‌ನಲ್ಲಿ ಅಳವಡಿಸಿದ ಕ್ಯಾಮೆರಾಗಳನ್ನು ಪತ್ತೆ ಹಚ್ಚುವುದು ಹೆಚ್ಚು ಹೊತ್ತು ಹಿಡಿಯಲಿಲ್ಲ. ಪ್ರದೀಪನ ಈ ಕೃತ್ಯ ಅವಳಿಗೆ ಜೀರ್ಣಿಸಿಕೊಳ್ಳಲೇ ಕಷ್ಟವಾಗಿತ್ತು. ಆಫೀಸಿನಲ್ಲಿ ಕುಳಿತು ಮೊಬೈಲ್ ಪರದೆಯ ಮೇಲೆ ಕಣ್ಣು ಹಾಯಿಸಿದ ಪ್ರದೀಪನಿಗೆ ನಿವಿ ಸಿಸಿಟಿವಿ ಅಳವಡಿಸಿರುವುದನ್ನು ಪತ್ತೆ ಹಚ್ಚಿದ್ದು ಅರಿವಾಗಿತ್ತು. ಅವನ ನಿರೀಕ್ಷೆಯಂತೇ ಅವಳು ಕರೆ ಮಾಡಿದ್ದಳು.

'ಮನೆ ಒಳಗೆ ಸಿಸಿಟಿವಿ ಯಾಕೆ ಫಿಕ್ಸ್ ಮಾಡಿದ್ದೀರಾ? ಏನು ನಿಮ್ಮ ಉದ್ದೇಶ? ಹಾಲ್‌ನಲ್ಲಿ, ಕಡೆಗೆ ಬೆಡ್ ರೂಮಿನಲ್ಲೂ. ನಾಚ್ಕೆ ಆಗಲ್ವಾ ನಿಮಗೆ? ಛಿ' ನಿವೇದಿತಾ ಉರಿದು ಬಿದ್ದಳು.

'ನಿವಿ, ಅದು ಹಾಗಲ್ಲ'.

'ನೀವಿಷ್ಟು ಚೀಪ್ ಅಂತ ನಾನು ಊಹಿಸಿರಲಿಲ್ಲ. ಬೆಡ್ ರೂಮಿನಲ್ಲಿ? ಏನಿತ್ತು ನಿಮ್ಮ ಉದ್ದೇಶ?'

'ನಿವಿ, ನಿನಗೆ ಏನೇ ಹೇಳಿದರೂ ಅರ್ಥ ಮಾಡಿಕೊಳ್ಳುವ ಮನಸ್ಥಿತಿಯಲ್ಲಿ ನೀನಿಲ್ಲ. ಬರೀ ಅಪಾರ್ಥವೇ ಕಾಣುತ್ತದೆ. ಸೋ... ಪ್ಲೀಸ್ ಉದ್ರಿಕ್ತಳಾಗಬೇಡ. ನಾನು ಬಂದ ಬಳಿಕ ನಿನಗೆ ಸಮಾಧಾನವಾಗಿ ಎಲ್ಲಾ ವಿವರಿಸ್ತೇನೆ ಆಯ್ತಾ?' ಪ್ರದೀಪ ಅನುನಯದ ಸ್ವರದಲ್ಲೆಂದ.

'ಇಷ್ಟು ದಿನ ಅಪಾರ್ಥ ಮಾಡಿಕೊಂಡಿದ್ದೆ ಪ್ರದೀಪ್. ಈಗ ಸರಿಯಾಗೇ ಅರ್ಥವಾಗ್ತಿದೆ ಎಲ್ಲ' ಎಂದವಳು, 'ನಿಮಗೆ ನನ್ನ ಮೇಲೆ ನಂಬಿಕೆ ಇಲ್ಲ. ನಿಮಗೆ ನನ್ನ ನಡತೆ ಮೇಲೆ ಅನುಮಾನ ಇದೆಯಾ? ಅದಿಕ್ಕೆ ನೀವು ಈ ಪ್ರಭಾವತೀನ್ನ ಇಲ್ಲಿ ತಂದಿದ್ದೀರ. ಅಲ್ದೇ ಈ ಸಿಸಿಟಿವಿ ಬೇರೆ ಫಿಕ್ಸ್ ಮಾಡಿದೀರಾ' ನಿವೇದಿತಾ ಸಿಟ್ಟಿನ ಭರದಲ್ಲಿ ಮನಸ್ಸಿಗೆ ಬಂದದ್ದೆಲ್ಲವನ್ನೂ ಹೊರಗೆ ಕಕ್ಕಿದಳು. ಪ್ರದೀಪ ಅವಳ ಯೋಚನೆಯ ದಿಕ್ಕು ಎತ್ತಲೋ ಸಾಗಿದ್ದನ್ನು ಕಂಡು ದ್ರವಿಸಿ ಹೋದ.

'ಛೆ ಛೇ... ನಿವಿ. ಇಲ್ಲ ಪ್ಲೀಸ್' ಅವನ ಸಮರ್ಥನೆಯ ಮಾತುಗಳಿಗೆ ಅವಳು ಅವಕಾಶವೇ ನೀಡದೇ ಸಂಪರ್ಕ ಕಡಿದಿದ್ದಳು. ಅಲ್ಲಿಗೆ ಬಂದ